ಚಿಕ್ಕ, ಚಿಕ್ಕಪ್ಪ? 'ಋಣ ಕಡಿಯಿತು' ಎಂದು ಎಷ್ಟೇ ಸಮಾಧಾನಿಸಿಕೊಳ್ಳಲೆತ್ನಿಸಿದರೂ ನಾಗರಾಜನ ಮನಸ್ಸು ವಿಲಿವಿಲಿಗುಟ್ಟಿತ್ತು, ಕಳಚಿದ ಹಲ್ಲಿಯ ಬಾಲ ಮತ್ತದೆಷ್ಟೋ ಹೊತ್ತು ಜೀವ ಹಿಡಿದುಕೊಂಡು ವಿಲಿಗುಟ್ಟುವಂತೆ.

★★★

ಉದ್ದೇಶಪೂರ್ವಕವಾಗಿ ಸುದ್ದಿ ತಂದು ಕಿವಿಗೆ ಎರೆಯುವವರು ಯಾರಾದರೂ ಇದ್ದೇ ಇರುತ್ತಿದ್ದರು. ಅಥವಾ ಉದ್ದೇಶಪೂರ್ವಕವಲ್ಲವಾ? ತಮ್ಮೆರಡು ಕುಟುಂಬಗಳ ನಡುವೆ ಹೀಗೊಂದು ಮನಸ್ತಾಪ ಹುಟ್ಟಿಕೊಂಡಿದೆ ಎಂದು ಇವರಿಗೆ ಗೊತ್ತಾಗಬೇಕಾದರೂ ಹೇಗೆ? ಚಿಕ್ಕಿ ಹರಕುಬಾಯಿಯವಳು. ಅವಳ ತೌರಿನ ಕಡೆಯ ಸಂಬಂಧಿಗಳು ಈ ಸುತ್ತಮುತ್ತಲಲ್ಲಿ ಬೇಕಾದಷ್ಟಿದ್ದಾರೆ. ಒಬ್ಬರಿಗೆ ಗೊತ್ತಾದರೆ ಸಾಕಲ್ಲ, ಹತ್ತು ಮಂದಿಯ ಕಿವಿ ತಲುಪುತ್ತದೆ. ಇಷ್ಟಕ್ಕೂ ಅವಳು ಏನು ಹೇಳಬಹುದು? ಹೇಳಿರುತ್ತಾಳೆ ತನ್ನನ್ನು ಸರಿಗಟ್ಟಿಕೊಂಡು. ಮಂಡೆ ಸಮ ಇದ್ದವರಿಗೆ ವಾಸ್ತವ ಅರ್ಥವಾಗುತ್ತದೆ. ತಮ್ಮದೇ ರಕ್ತ ಹಂಚಿಕೊಂಡು ಹುಟ್ಟಿದ ಮಕ್ಕಳನ್ನು ಬೇರೆಯವರಿಗೆ ಕೊಡುವುದು ಅಂದರೆ ಅಷ್ಟು ಸಸಾರದ ಮಾತಾ? ಅಥವಾ ಇನ್ನೇನಾದರೂ ಕತೆ ಕಟ್ಟಿ, ಕಾಲು ಬಾಲ ಸೇರಿಸಿ ತನ್ನ ಮೇಲೊಂದು ಗೂಬೆ ಕೂರಿಸಿರುತ್ತಾಳಾ? ತಾನು ವೃಥಾ ಏನೇನೋ ಕಲ್ಪಿಸಿಕೊಂಡು ತಲೆ ಕೆಡಿಸಿಕೊಳ್ಳುತ್ತಿದ್ದೇನೆ ಎಂದು ಸ್ವತಾ ನಾಗರಾಜನಿಗೇ ಅನಿಸುತ್ತಿತ್ತು. ಅದಕ್ಕೆ ತಕ್ಕಂತೆ ಸೀತೆ ಸದಾ ಅವನನ್ನು ಸಂತೈಸುವ ಮಾತಾಡುತ್ತಿದ್ದಳು,

"ಆಯ್ತು, ಹೋಯ್ತು. ದಿವಸಾ ಅವರ ಮಕ ನೋಡ್ಕಂಡಿರ್ಬೇಕು ಅಂದ್ರೆ ಆ ಪರಿಸ್ಥಿತೀನೂ ಇಲ್ಲ. ಮತ್ಯಾಕೆ ಚಿಂತೆ ನಿಮಗೆ? ಬಿಸಾಕಿ ಅತ್ಲಾಗೆ..."

'ಬಿಸಾಕಿ ಅತ್ಲಾಗೆ...', 'ಬಿಸಾಕಿ ಅತ್ಲಾಗೆ...' ಹಿತೋಪದೇಶ ಕೇಳಿ ಕೇಳಿ ತಲೆಯೊಳಗಿದ್ದುದನ್ನು ಗುಡಿಸಿ ಬಿಸಾಕಿ ಎಲ್ಲಾ ಚೊಕ್ಕ ಮಾಡಿಕೊಂಡೆ ಅನ್ನುವಾಗ ಯಾರೋ ಪೇಟೆಯಲ್ಲಿ ಸಿಕ್ಕಿದ ಚಿಕ್ಕಿಯ ಪೈಕಿಯವರು ಹೊಸ ಸುದ್ದಿ ತಲುಪಿಸುತ್ತಿದ್ದರು,

"ಪ್ರಮೋಷನ್ ಆಯ್ತಂತಲ್ಲ ನಿಮ್ಮ ಭಾವಂಗೆ? ಡೆಲ್ಲಿ ಕಡೆ ಹೋಗಿದಾರಂತೆ..."

"ಹಾಂ... ಹಾಂ..." ತನಗೂ ಗೊತ್ತು ಎನ್ನುವ ಧಾಟಿಯಲ್ಲಿ ಒಂದು ಪ್ರತಿಕ್ರಿಯೆ.

ಚಿಕ್ಕ ತೀರಿಕೊಂಡಿದ್ದು, ಮೂರು ವರ್ಷದ ಸರ್ವೀಸ್ ಮುಗಿಸಿ ಮತ್ತೆ ಈ ಕಡೆಗೇ ಅಮೃತನ ಕುಟುಂಬ ಬಂದಿದ್ದು, ಎರಡು ವರ್ಷಗಳ ಹಿಂದೆ ಅಮೃತಾ ಹೆಣ್ಣುಮಗುವೊಂದನ್ನು ದತ್ತು ತೆಗೆದುಕೊಂಡಿರುವ ವರೆಗೆ ಎಲ್ಲಾ ಸುದ್ದಿ ತಿಳಿದಿತ್ತು, ಮೂರನೆಯವರ ಮುಖಾಂತರ. ಒಂದೇ ಕುಟುಂಬ ಅಂದರೆ ಚಿಕ್ಕಿಯ ಸಾವಿನ ಸೂತಕ ತಮಗೂ ಇರುತ್ತದೆ. ಆದರೂ ಒಂದು ಮಾತು ಹೇಳಬೇಕೆನಿಸಲಿಲ್ಲವಾ? ದೂರದ ದೆಹಲಿಯವರೆಗೆ ತಾನು ಹೋಗುತ್ತಿದ್ದುದು ಸುಳ್ಳು. ಕೊನೇಪಕ್ಷ ಕರ್ತವ್ಯದ ದೃಷ್ಟಿಯಿಂದಲಾದರೂ ಒಂದು ಮಾತು ತಿಳಿಸಬಹುದಿತ್ತು. ಇನ್ನು ಮುಂದಾದರೂ ಎಲ್ಲಾ ಸುಸೂತ್ರವಾಗಲಿ, ತನ್ನ ದತ್ತುಪುತ್ರಿಯೊಂದಿಗೆ ಅಮೃತಾ ಸುಖವಾಗಿರಲಿ ಎಂದು ಮನಸಾರೆ ಹಾರೈಸಿದ್ದ ನಾಗರಾಜ. ಹೀಗಿರುವಾಗ ನಡೆದಿದ್ದೇ ಬೇರೆ. ಹೋಗಿಬಿಟ್ಟಳಂತೆ ಅಮೃತಾ. ಇನ್ನೂ ನಲವತ್ತೊಂದೋ, ನಲವತ್ತೆರಡೋ...

"ಸುದ್ದಿ ಗೊತ್ತಾಯ್ತಲ್ಲ..." ಎನ್ನುತ್ತಲೇ ಬೆಳಬೆಳಗ್ಗೆ ಯಾರೋ ಫೋನ್ ಮಾಡಿ ಸುದ್ದಿ ತಲುಪಿಸಿದ್ದರು. 'ಏನಾಗಿತ್ತಂತೆ?' ಎಂದು ಕೇಳಲು ಇವನಿಗೆ ಹೀನಾಯ. ಅಣ್ಣ ಅನಿಸಿಕೊಂಡವನಿಗೆ ಏನೂ ಗೊತ್ತಿರಲಿಲ್ಲವೇ ಎಂದು ಅವರು ಅಂದುಕೊಳ್ಳಬಹುದೆಂಬ ಮುಜುಗರ. ಎಂತಾ ಸನ್ನಿವೇಶದಲ್ಲೂ ತನ್ನ ಪ್ರತಿಷ್ಠೆ ಕಾದುಕೊಳ್ಳಲು ಮನಸ್ಸು ಜಾಗೃತವಾಗಿರುತ್ತದೆಯೇನೋ. ಅಮೃತಾ ಇನ್ನಿಲ್ಲ ಅನ್ನುವುದೊಂದೇ ಸತ್ಯ. ಇನ್ಯಾವತ್ತೂ ಅಮೃತಾ ಈ ಮನೆಯ ಉಣುಗೋಲು ಸರಿಸಿ 'ನಾಗಣ್ಣಾ...' ಎಂದು ಆಪ್ಯಾಯತೆಯಿಂದ ಕರೆಯುತ್ತಾ ಬರುವುದಿಲ್ಲ ಎನ್ನುವ ನೆನವರಿಕೆ ಬಿಸಿತುಪ್ಪವಾಗಿ